

ಎಡದಿಂದ ಬಲಕ್ಕೆ:

1. ಎಲ್ಲರ ಅಭ್ಯುದಯವನ್ನೇ ಬಯಸುವವನಿಗೆ ಒಂದು ಗೌರವದ ಹೆಸರು 4
3. ಎಲ್ಲ ಪರಿಭವಗಳಿಂದಲೂ ಹೊರಬಂದದ್ದು ಪ್ರಥಮ ಸಂವತ್ಸರ 3
4. ಹಗಲಿರುಳಿನ ನಿತ್ಯ ಚಕ್ರ ಸುಲಭವಾಗಿ ಅರ್ಥವಾಗುವಂತಿಲ್ಲ 3
6. ನಿರ್ಧಾರವಿಡೀ ಬದಲಾಗಿದೆಯೆಂಬ ಸುದ್ದಿಗೆ ಬುಡವಿಲ್ಲ, ಬಿಡಿ 4
7. ದಾರಿಯ ಉದ್ದಕ್ಕೂ ಹೇಗೆ ಚೆಲ್ಲಿಹೋಗಿದೆ ನೋಡಿ, ನೀರು 3
9. ಚೆನ್ನಾಗಿ ತಯಾರಿಯನ್ನು ನಡೆಸಿದ್ದಾನೆ ಆತನ ಪುತ್ರ 3
11. ಗೆದ್ದವನಿಗೆ ಬಹುಮಾನ ನೇರ ಒಂದಷ್ಟು ರೊಕ್ಕ 3
13. ರಾಜ್ಯವನ್ನಿಡೀ ಆವರಿಸಿದೆ ಒಂದು ವಿಧ ರೋಗದ ಜೊತೆಗಾರ 3
15. ಪಾರವೇ ಇಲ್ಲದಂತೆ ಕಾಣುವ ನೀರು ತುಂಬಿದ ಪ್ರದೇಶ ಸಾಗರವೇ? 4
17. ಏಳ್ಗೆಯನ್ನೇ ಸದಾ ಬಯಸುತ್ತಾನೆ ಈ ಮಿತ್ರ 3
18. ಎಲ್ಲರ ಗಮನವನ್ನೂ ಸೆಳೆಯುವಂಥ ಹೊಳಪು 3
19. ಸತ್ಯ ಬದಲಾಯಿಸುವ ಯತ್ನ ಮಾಡುವವರಿಗೆ ತೊಂದರೆ ಕೊಡು 4

ಮೇಲಿಂದ ಕೆಳಕ್ಕೆ:

1. ಎಲ್ಲರಿಗೂ ಅನಿವಾರ್ಯ ಈ ಪೃಥ್ವಿ 3
2. ಗೌರವವನ್ನರಸಿ ಆತ ತಲುಪಿದ್ದು ಭಾರೀ ಶಹರ 3
3. ಸಂಪ್ರದಾಯಾನುಸಾರ ಹಂಚಿದ ದೇವಾರ್ಪಿತ ವಸ್ತು 3
5. ಇಷ್ಟೆಲ್ಲ ವಿನಾಯಿತಿಯನ್ನು ನೀಡುವ ಪ್ರಯತ್ನ ತುಂಬ ಹೊಸದು 3
7. ಧ್ಯಾನ ಮಾಡಲು ಉಪಲಬ್ಧ ಇರುವುದುಇಂಥ ತೋಟ ಮಾತ್ರ 3
8. ನೆಲ ಕೊರೆದು ಹೊರತೆಗೆದ ವಸ್ತು ಕಪ್ಪು ಬಣ್ಣದ್ದು 3
9. ಅಲ್ಲಿಗೆ ತೆರಳುವವರೆಲ್ಲ ಒಯ್ಯಲೇಬೇಕು ಸ್ವಲ್ಪ ಚಿಗುರು 3
10. ಜಯಕಾರವನ್ನು ಗಳಿಸಲೆಂದು ನಡೆಸಿದ್ದು ಈ ಹೋಮ ಹೌದೇ? 3
12. ಬಡಿಗೆಯ ಏಟಿಗೆ ಛಿದ್ರವಾಯಿತು, ಮಣ್ಣಿನ ಬಿಂದಿಗೆ 3
14. ಗಂಜಿಯನ್ನು ತುಂಬಿಟ್ಟ ಪಾತ್ರೆಯಲ್ಲಿ ಇದೇಕೆ ಸೋರಿಕೆ? 3
15. ಪಾನೀಯದಂತೆ ತಯಾರಿಸಿದ್ದು ಊಟಕ್ಕೆ ಸಿಹಿ ಖಾದ್ಯ 3
16. ದುಃಖವನ್ನು ಮರೆಸಲು ಮೊದಲು ಸಮಾಧಾನಗೊಳಿಸು 3

## 16–07–2020 ಉತ್ತರಗಳು

**ಎಡದಿಂದ ಬಲಕ್ಕೆ:**

1. ಸಹಮತ 3. ಗೆಸಿಹಾ (=ಹಾಸಿಗೆ ಹಿಂದುಮುಂದು) 4.ನಮಿಸು 6. ಯಮಲೋಕ 7. ನಿರಂತರ 8. ಲಾಭಕರ 10. ಸುಪ್ರಸಿದ್ಧ12. ತರಕಾರಿ 14. ಕಾಟಾಚಾರ 16. ರಟನ 17. ಮಧುರ 18. ನಜರಾಣೆ

**ಮೇಲಿಂದ ಕೆಳಕ್ಕೆ:**

1. ಸಹಾಯ 2. ತನಕ 3. ಗೆಳೆತನ 5. ಸುಲಭ 7. ನಿಧಾನಿಸು 9. ರಹದಾರಿ 11. ಸಿತಾರ 13. ತರತರ 14. ಕಾನನ 15. ರಮಣಿ

ಪ್ರಶ್ನಾಂಕಣ

# ಗೂಬೆ: ಸದ್ದೇ ಇಲ್ಲದೆ ಹಾರಬಲ್ಲದು ಹೇಗೆ?

ಗೂಬೆ ಒಂದು ನಿಶಾಚರಿ, ನಿಷ್ಣಾತ ಬೇಟೆಗಾರ ಹಕ್ಕಿ. ಸುಮಾರು 225 ಪ್ರಭೇದಗಳಿರುವ ಎಲ್ಲ ಗೂಬೆಗಳೂ ಇಬ್ಬಗೆಯ ಅದ್ಭುತ ವಿಶಿಷ್ಟ ಗುಣಗಳನ್ನು ಪಡೆದಿವೆ. ಇರುಳಿನಲ್ಲೂ ಸ್ಪಷ್ಟವಾಗಿ ಕಾಣಬಲ್ಲ ದೃಷ್ಟಿ ಶಕ್ತಿ ಮತ್ತು ಸದ್ದೇ ಇಲ್ಲದ ಹಾರಾಟ ಸಾಮರ್ಥ್ಯ. ಕಿಂಚಿತ್ತೂ ಶಬ್ದ ಮಾಡದ ಹಾರಾಟ ಕೌಶಲ್ಯವೇ ಈ ಹಕ್ಕಿಯ ಅಪ್ರತಿಮ ಬೇಟೆ ಸಾಮರ್ಥ್ಯಕ್ಕೆ ಅತ್ಯಂತ ಪ್ರಮುಖ ಕಾರಣ. ಈ ಕೌಶಲ್ಯದಿಂದಾಗಿಯೇ ವೇಗವಾಗಿ ಹಾರಿ ಬಂದು ಎರಗುವ ಗೂಬೆಯ ಸುಳಿವು ಬಲಿ ಪ್ರಾಣಿಗಳಿಗೆ ಅತ್ಯಲ್ಪವೂ ಸಿಗುವುದಿಲ್ಲ. ಖಗ ಸಾಮ್ರಾಜ್ಯದಲ್ಲಿ ಗೂಬೆಗೆ (ಮತ್ತು ಆಸ್ಟ್ರೇಲಿಯಾದ 'ಫ್ರಾಗ್ ಮೌತ್' ಹಕ್ಕಿಗೆ ಮಾತ್ರ) ಇಂಥ ಸಾಮರ್ಥ್ಯ ಪ್ರಾಪ್ತವಾಗಿರುವುದು ಹೇಗೆ?

ಅದಕ್ಕೆ ಕಾರಣ ಗೂಬೆಯ ರೆಕ್ಕೆಗಳ ಅತಿ ವಿಶಿಷ್ಟ ವಿನ್ಯಾಸ; ರೆಕ್ಕೆಗಳಲ್ಲಿನ ಗರಿಪುಕ್ಕಗಳ ತುಂಬ ವಿಶಿಷ್ಟ ರಚನೆ ಮತ್ತು ಜೋಡಣೆ. ನಿಸರ್ಗದ ಆ ಸೋಜಿಗದ ತಂತ್ರಗಾರಿಕೆಗಳನ್ನು ಗಮನಿಸಿ:

- ಗೂಬೆಗಳ ಶರೀರ ಗಾತ್ರಕ್ಕೆ ಹೋಲಿಸಿದರೆ ಅವುಗಳ ರೆಕ್ಕೆಗಳದು ಅಸಾಧಾರಣ ವಿಸ್ತಾರ (ಚಿತ್ರಗಳಲ್ಲಿ ನೋಡಿ). ರೆಕ್ಕೆಗಳ ಭಾರೀ ವೈಶಾಲ್ಯದಿಂದಾಗಿ ಹಾರುವಾಗ ಗೂಬೆಗೆ ರೆಕ್ಕೆಗಳನ್ನು ಬಡಿಯದೆ, ಹಾಗಾಗಿ ರೆಕ್ಕೆ ಬಡಿತದ ಸದ್ದೇ ಇಲ್ಲದೆ, ತೇಲಿ ಸಾಗುವುದು ಸಾಧ್ಯ.
- ಗೂಬೆ ರೆಕ್ಕೆಗಳ ಮುಂಬದಿಯ ಅಂಚಿನುದ್ದಕ್ಕೂ ಇರುವ ಗರಿಗಳು ಇತರ ಹಕ್ಕಿಗಳಂತಲ್ಲದೆ 'ಬಾಚಣಿಗೆಯಂತಹ' ರಚನೆಯನ್ನು ಹೊಂದಿವೆ.




ಆದರಿಂದಾಗಿ ಗೂಬೆ ಹಾರುವಾಗ ನುಗ್ಗಿ ಬರುವ ಗಾಳಿ ಪ್ರವಾಹ ಇತರ ಹಕ್ಕಿಗಳಲ್ಲಿ ಆಗುವಂತೆ ರೆಕ್ಕೆಗಳ ಮುಂಬದಿಯನ್ನು ಬಲವಾಗಿ ಘರ್ಷಿಸದೆ ಮೃದುವಾಗಿ ನಿಶ್ಶಬ್ದವಾಗಿ ಸಾಗಿಹೋಗುತ್ತದೆ.

- ಗೂಬೆ ರೆಕ್ಕೆಗಳ ಹಿಂಬದಿಯ ಅಂಚುಗಳ ಗರಿಗಳು ಮತ್ತೊಂದು ಬಗೆಯ ವಿಶಿಷ್ಟ ರಚನೆಯನ್ನು ಪಡೆದಿವೆ. ಆ ಗರಿಗಳು 'ಛಿದ್ರ ಛಿದ್ರವಾದಂತೆ ಕಾಣುವ' ಸ್ವರೂಪವನ್ನು ಪಡೆದಿವೆ. ಇಂಥ ರಚನೆಯಿಂದಾಗಿ ರೆಕ್ಕೆಗಳ ಮೇಲಿಂದಲೂ, ತಳದಿಂದಲೂ ಹರಿದು ಬರುವ ಗಾಳಿ ಪ್ರವಾಹದ ಅಲೆಗಳನ್ನು ಈ ಗರಿಗಳು ಭಗ್ನಗೊಳಿಸಿ ಶಬ್ದರಹಿತವಾಗಿಸುತ್ತವೆ.
- ಗೂಬೆ ರೆಕ್ಕೆಗಳ ಅಂಚುಗಳನ್ನು ಬಿಟ್ಟು ಉಳಿದೆಲ್ಲ ಪ್ರದೇಶಗಳು ಮತ್ತು ಬಾಲ, ಕಾಲುಗಳೂ 'ವೆಲ್ವೆಟ್'ನಂತೆ ತುಂಬ ಮೃದುವಾದ ಪುಕ್ಕಗಳಿಂದ ಆವೃತವಾಗಿವೆ. ಈ ಪುಕ್ಕಗಳು ಗಾಳಿ ಪ್ರವಾಹದ ಉಳಿದೆಲ್ಲ ಅಲ್ಪ ಸ್ವಲ್ಪ ಶಬ್ದಗಳನ್ನೂ ಹೀರಿಕೊಳ್ಳುತ್ತವೆ.

ಇವೆಲ್ಲದರ ಪರಿಣಾಮವಾಗಿ ಗೂಬೆ ಸದ್ದೇ ಇಲ್ಲದೆ ಹಾರಬಲ್ಲದಾಗಿದೆ.

■ ಎನ್. ವಾಸುದೇವ್